ತಿಳಿಯಿತು. ಐದಾರು ವರ್ಷಗಳ ಹಿಂದೆ, ಕೆಲಸದ ಮೇಲೆ ಈ ಊರಿಗೆ ಬಂದಿದ್ದ ಆತ ಇವರ ಮನೆಗೆ ಬಂದು ಎರಡು ವಾರ ಇದ್ದ. ಆಗ, ಈ ಮಗುವಿನ ಬಳಿಯೇ ಆತನಿಗೆ ಮಲಗಲು ಹಾಸುತ್ತಿದ್ದರು. ಒಂದೆರಡು ದಿನದ ನಂತರ, ಪ್ರತೀರಾತ್ರಿ, ಎಲ್ಲರೂ ಮಲಗಿದ ಮೇಲೆ ಆತ ಈ ಮಗುವಿನ ಮುಖ, ತುಟಿಗಳಿಗೆ ಮುತ್ತಿಡುವುದು, ಅವಳ ಗುಪ್ತಾಂಗವನ್ನು ಮುಟ್ಟುವುದು ಮಾಡುತ್ತಿದ್ದ. ಆಗ ಆ ಮಗುವಿಗೆ ಹಿಂಸೆ ಎನಿಸಿದರೂ, ಏನೂ ತಿಳಿಯಲಿಲ್ಲ, ಯಾರ ಬಳಿ ಹೇಳಲೂ ಆಗಲಿಲ್ಲ. ಆ ಸಂಬಂಧಿ, ಒಂದು ವರ್ಷದ ಹಿಂದೆ ಇದೇ ಊರಿಗೆ ಬಂದು, ಇಲ್ಲೇ ನೆಲೆಸಿದ್ದಾನೆ. ಆಗಾಗ ಇವರ ಮನೆಗೆ ಬಂದು ಹೋಗುತ್ತಿದ್ದಾನೆ. ಈಗ ಆತ ಈ ಮಗುವಿಗೆ ಏನೂ ಕಿರುಕುಳ ಕೊಡುತ್ತಿಲ್ಲ. ಆದರೆ ಹಳೆಯ ನೆನಪುಗಳ ಬೇಗೆಯಿಂದ ಹಾಗೂ ಆತ ತನ್ನ ಮನೆಗೆ ಆಗಾಗ ಬಂದು ಹೋಗುತ್ತಿರುವುದರಿಂದ ಈ ಮಗು ಆತಂಕಕ್ಕೆ ಒಳಗಾಗಿದ್ದಳು. ಈ ತೊಂದರೆ ಶುರುವಾಗಿತ್ತು.

ಹೆಣ್ಣು ಮಕ್ಕಳಾಗಲೀ, ಗಂಡು ಮಕ್ಕಳಾಗಲೀ ಈ ರೀತಿಯ ಲೈಂಗಿಕ ಕಿರುಕುಳಗಳಿಗೆ ಎಲ್ಲಿಯಾದರೂ ತುತ್ತಾಗಬಹುದು. ಮನೆಗಳಲ್ಲಿ, ಬೇರೆಲ್ಲಿಗೋ ಹೋದಲ್ಲಿ, ಶಾಲೆಗಳಲ್ಲಿ – ಹೀಗೆ ಎಲ್ಲಿಯಾದರೂ ಆಗಬಹುದು. ಹಿಂಸೆ ನೀಡುವವರೂ ಅಷ್ಟೇ, ಗಂಡಸೂ ಆಗಿರಬಹುದು, ಹೆಂಗಸೂ ಆಗಿರಬಹುದು.

ಮಕ್ಕಳ ಪೂರ್ಣ ಅರಿವಿಗೆ ಬಾರದಂತಹ ಲೈಂಗಿಕ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸುವುದು, ಅಂದರೆ – ಲೈಂಗಿಕವಾಗಿ ಅವರ ಅಂಗಾಂಗಗಳನ್ನು ಮುಟ್ಟುವುದು, ತಮ್ಮ ಮೈ, ಗುಪ್ತಾಂಗಗಳನ್ನು ಅವರಿಂದ ಮುಟ್ಟಿಸಿಕೊಳ್ಳುವುದು, ಅವರ ನಗ್ನ ದೇಹವನ್ನು ಚಿತ್ರೀಕರಿಸುವುದು, ಹಾಗೆ ತೆಗೆದುಕೊಂಡ ಅವರ ಫೋಟೊ, ವಿಡಿಯೊಗಳನ್ನು ಬಳಸುವುದು, ಇನ್ನೂ ಮುಂದುವರೆದು, ಲೈಂಗಿಕ ಬಲಾತ್ಕಾರಗಳೂ ನಡೆಯುತ್ತವೆ. ಎಷ್ಟೋ ಬಾರಿ ಮನೆಯವರಿಗೆ, ತಂದೆ ತಾಯಿಯರಿಗೂ ಇದು ತಿಳಿಯದೇ ಹೋಗುತ್ತದೆ. ಅವರ ಗಮನಕ್ಕೆ ಬಂದರೂ, ಸುಮಾರಷ್ಟು ತಂದೆ ತಾಯಿಯರು, 'ಹೊರಗಿನವರಿಗೆ ತಿಳಿದರೆ ತಮಗೇ ಅವಮಾನ'ವೆಂಬಂತೆ, ಅದರ ಬಗ್ಗೆ ಏನೂ ಮಾತನಾಡದೇ, ವಿರೋಧವನ್ನೂ ವ್ಯಕ್ತಪಡಿಸದೇ ಇದ್ದುಬಿಡುತ್ತಾರೆ. ಸ್ವಂತ ಮನೆಯವರೇ, ಅಣ್ಣನೋ, ತಂದೆಯೋ ಸಹ ಇಂತಹ ಲೈಂಗಿಕ ಕಿರುಕುಳ ಕೊಡುವಂತಹ ಉದಾಹರಣೆಗಳೂ ಸಾಕಷ್ಟಿವೆ.

ಭಾರತದ ನೂರಕ್ಕೆ 53 ಮಕ್ಕಳು ಒಂದಲ್ಲ ಒಂದು ರೀತಿಯ ಇಂತಹ ಲೈಂಗಿಕ ಹಿಂಸೆಯನ್ನು ಅನುಭವಿಸುತ್ತಾರೆ. ಅದರಲ್ಲಿ ಶೇ. 90 ನಿದರ್ಶನಗಳಲ್ಲೂ ಕಿರುಕುಳ ನೀಡುವ ವ್ಯಕ್ತಿ ಮಗುವಿಗೆ ಬಹಳ ತಿಳಿದಿರುವ ಹಾಗೂ ಮಗುವಿನ ಭರವಸೆ ಹೊಂದಿರುವ ವ್ಯಕ್ತಿಯೇ ಆಗಿರುತ್ತಾರೆ (ಆಧಾರ: ಭಾರತ ಸರ್ಕಾರದ, ಮಹಿಳೆಯರು ಹಾಗೂ ಮಕ್ಕಳ ಕಲ್ಯಾಣ ಇಲಾಖೆಯ ಸಮೀಕ್ಷೆ, 2007).

ಇಂತಹ ಅಪರಾಧಗಳ ವಿಚಾರಣೆ ಹಾಗೂ ಶಿಕ್ಷೆಗಾಗಿ, 'ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸುವ ಕಾಯಿದೆ, 2012' (Posco) ಜಾರಿಗೆ ಬಂತು. ಈ ಕಾಯಿದೆಯಲ್ಲಿ, ಮಕ್ಕಳ ಮೇಲೆ ನಡೆಯುವ ಲೈಂಗಿಕ ಹಿಂಸಾಚಾರಗಳನ್ನು – ಲೈಂಗಿಕ ಕಿರುಕುಳ (ಸೆಕ್ಷುವಲ್ ಹರಾಸ್‌ಮೆಂಟ್), ಲೈಂಗಿಕ ಹಿಂಸೆ (ಸೆಕ್ಷುವಲ್ ಅಸಾಲ್ಟ್) ಹಾಗೂ ಲೈಂಗಿಕ ಬಲಾತ್ಕಾರ (ಪೆನೆಟ್ರೇಟಿವ್ ಸೆಕ್ಷುವಲ್ ಅಸಾಲ್ಟ್) ಎಂಬ ಮೂರು ವಿಭಾಗಗಳಾಗಿ ವಿಂಗಡಿಸಿದೆ. ಮಕ್ಕಳನ್ನು ಕಾಮ ಪ್ರಚೋದಕ (ಪೋರ್ನೋಗ್ರಫಿ) ವಿಡಿಯೊಗಳಿಗೆ ಬಳಸುವುದನ್ನೂ ಅಪರಾಧವಾಗಿ ಪರಿಗಣಿಸಿದೆ. ಎಲ್ಲವಕ್ಕೂ ಕಠಿಣ ಶಿಕ್ಷೆಯನ್ನು ನಮೂದಿಸಲಾಗಿದೆ. ಮಗುವಿಗೆ ಈ ರೀತಿಯ ಲೈಂಗಿಕ ಹಿಂಸಾಚಾರವಾದಾಗ ಅವರ ಪೋಷಕರು ಅಥವಾ ಘಟನೆಯನ್ನು ಕಂಡವರು, ಘಟನೆಯ ಬಗ್ಗೆ ತಿಳಿಯಪಟ್ಟವರೂ ಕೂಡಾ, ಅಲ್ಲಿಯ ಪೊಲೀಸ್ ಠಾಣೆ ಅಥವಾ ಮಕ್ಕಳ ವಿಶೇಷ ಪೊಲೀಸ್ ಅಧಿಕಾರಿಗೆ ದೂರು ಸಲ್ಲಿಸಬಹುದಾಗಿ ಈ ಕಾಯಿದೆ ತಿಳಿಸುತ್ತದೆ. ಆದರೆ ವಾಸ್ತವದಲ್ಲಿ, ಮಕ್ಕಳ ಮೇಲೆ ನಡೆಯುವ ಲೈಂಗಿಕ ಹಿಂಸಾಚಾರಗಳ ವರದಿಯಾಗುವುದು ಕಡಿಮೆಯೆಂದೇ ಹೇಳಬಹುದು.

## ಶಿಕ್ಷಿಸಿದರೆ ಸಾಕೆ?

ಈ ಕಾನೂನು, ಕಾಯಿದೆಗಳು ಈ ಹಿಂಸಾಚಾರಗಳ ವಿಚಾರಣೆ, ಶಿಕ್ಷೆಗಳನ್ನು ನಮೂದಿಸುತ್ತವೆಯೇ ಹೊರತು, ಅವುಗಳಿಂದ ಮಕ್ಕಳನ್ನು ರಕ್ಷಿಸುವ ಅಥವಾ ಅವುಗಳ ತಡೆಗಟ್ಟುವಿಕೆಯ ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ. ಈ ನಿಟ್ಟಿನಲ್ಲಿ ಹಾಗೂ ವಿಷಯದ ಅರಿವು ಮೂಡಿಸುವಲ್ಲಿ ಸರ್ಕಾರಗಳು ಹಲವಾರು ಕ್ರಮ ಕೈಗೊಳ್ಳಬೇಕಾಗಿದೆ. ಮನೆಯಲ್ಲಿ ಪೋಷಕರು, ಶಾಲೆಗಳು, ಅಲ್ಲಿನ ಅಧ್ಯಾಪಕರು, ಎಲ್ಲರೂ ಈ ವಿಷಯದ ತಿಳಿವಳಿಕೆ ಪಡೆದು, ಗಂಭೀರತೆಯನ್ನು ಅರಿತು, ಇಂತಹ ಹಿಂಸಾಚಾರ ನಡೆಯದಂತೆ ಎಚ್ಚರವಹಿಸಬೇಕಾದ ಅಗತ್ಯವೂ ಬಹಳ ಇದೆ.

'ಮಕ್ಕಳು' ಎಂದರೆ, 18 ವರ್ಷ ವಯಸ್ಸು ಇನ್ನೂ ತುಂಬದ ವ್ಯಕ್ತಿಗಳು ಎನ್ನುತ್ತದೆ ಈ ಕಾಯ್ದೆ. ಇನ್ನೂ 18 ತುಂಬದ ಹುಡುಗಿ ಪ್ರೇಮಿಸಿ, ತನ್ನ ಪ್ರೇಮಿಯೊಂದಿಗೆ ಓಡಿಹೋದಂತಹ ಹಲವಾರು ನಿದರ್ಶನಗಳಲ್ಲಿ, ಅಂತಹ ಹೆಣ್ಣುಮಕ್ಕಳ ಪೋಷಕರು ಈ ಕಾಯ್ದೆಯನ್ನು ದುರುಪಯೋಗಪಡಿಸಿ, ಅವಳು ಪ್ರೇಮಿಸಿದ ಹುಡುಗನ ವಿರುದ್ಧ ದೂರು ದಾಖಲಿಸಿದ ಪ್ರಕರಣಗಳು ಬಹಳ. ಪೋಷಕರ ಇಂತಹ ನಡತೆ ಕಾನೂನಿನ ನಿಜವಾದ ಉದ್ದೇಶವನ್ನು ಸೋಲಿಸುತ್ತದೆ. ಅಷ್ಟೇ ಅಲ್ಲದೇ, ಆ ಯುವಜನರ ಬಾಳನ್ನೂ ಹಾಳುಗೆಡವುತ್ತದೆ. ಪೋಷಕರು ಇಂತಹ ಸಂದರ್ಭಗಳಲ್ಲಿ ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾದ ಅವಶ್ಯಕತೆ ಇದೆ.

## ಲೈಂಗಿಕ ಹಿಂಸೆಯೊಂದೇ ಅಲ್ಲ

ಲೈಂಗಿಕ ಹಿಂಸಾಚಾರ ಒಂದೆಡೆಯಾದರೆ, ಇನ್ನೂ ಹಲವಾರು ರೀತಿಯ ಹಿಂಸಾಚಾರಗಳಿಗೆ ಮಕ್ಕಳು ಬಲಿಯಾಗುತ್ತಾರೆ. ಅವು ದೈಹಿಕ ಹಿಂಸೆಯಾಗಿರಬಹುದು, ಮಾನಸಿಕ, ಭಾವನಾತ್ಮಕ ಹಿಂಸೆಯೂ ಆಗಿರಬಹುದು. ಹೊಡೆಯುವುದು (ಕೈ, ಬೆತ್ತ, ಬೆಲ್ಟ್‌ನಿಂದ) ಅಥವಾ ಇನ್ನಾವುದೇ ದೈಹಿಕ ಹಿಂಸೆ, ದೊಡ್ಡ ದನಿಯಲ್ಲಿ ಕೂಗಾಡಿ ಬೈಯುವುದು, ಹೆದರಿಸುವುದು, ಕೂಡಿಹಾಕುವುದು, ಹೀಯಾಳಿಸುವುದು, ಲೇವಡಿ ಮಾಡುವುದು, ನಿರ್ಲಕ್ಷಿಸುವುದು – ಇವೆಲ್ಲವೂ ಹಿಂಸೆಯ ನಡವಳಿಕೆಗಳೇ ಆಗಿವೆ.

"ಮಕ್ಕಳನ್ನು ಶಿಸ್ತಿನಿಂದ ಬೆಳೆಸಲು ಅವರನ್ನು ಶಿಕ್ಷಿಸುವುದು ಅಗತ್ಯ ಎಂದು ಭಾರತದ ಹೆಚ್ಚಿನ ತಂದೆ ತಾಯಿಯರು, ಅಧ್ಯಾಪಕರು ನಂಬಿದ್ದಾರೆ ಹಾಗೂ ಮಕ್ಕಳನ್ನು ಹಲವಾರು ರೀತಿಯಲ್ಲಿ ಶಿಕ್ಷಿಸುವುದು ಸರ್ವೇಸಾಮಾನ್ಯವಾಗಿ ಕಂಡುಬರುತ್ತದೆ" ಎಂದು ಯುನಿಸೆಫ್ 2019ರಲ್ಲಿ ನಡೆಸಿದ ಒಂದು ಸಮೀಕ್ಷೆಯ ವರದಿ ಹೇಳುತ್ತದೆ.

ಮನೋವೈದ್ಯರು, ಮಾನಸಿಕ ಆರೋಗ್ಯತಜ್ಞರು ಹೇಳುವಂತೆ – ಇವೆಲ್ಲವೂ ಹಿಂಸೆಯ ಮುಖಗಳೇ ಆಗಿವೆ. ಇಂಥ ಯಾವುದೇ ರೀತಿಯ ಹಿಂಸೆಗೆ ಗುರಿಯಾದ ಮಗುವಿನ ಆತ್ಮಸ್ಥೈರ್ಯಕ್ಕೆ, ವ್ಯಕ್ತಿತ್ವಕ್ಕೆ, ಮಾನಸಿಕ ಆರೋಗ್ಯಕ್ಕೆ, ಯಾವುದಾದರೊಂದು ಆಳವಾದ ಪೆಟ್ಟು ಬಿದ್ದಿರುತ್ತದೆ.

ಮನೆಗಳಲ್ಲಿ, ಶಾಲೆಗಳಲ್ಲಿ, ಹೊರ ಜಗತ್ತಿನಲ್ಲಿ, ಮಕ್ಕಳನ್ನು ಬೆಳೆಸುವ ಮಾನವೀಯ, ಹಾಗೂ ವೈಜ್ಞಾನಿಕವಾಗಿ ಸರಿಯಾದ ರೀತಿಗಳನ್ನು ರೂಢಿಸಿಕೊಳ್ಳಬೇಕೆಂಬ ಅರಿವು ನಮ್ಮ ಸಮಾಜದಲ್ಲಿ ಕಡಿಮೆಯೆಂದೇ ಹೇಳಬಹುದು. ಇವ್ಯಾವುದನ್ನೂ ನಿಯಂತ್ರಿಸುವ ಕಾನೂನು ಕೂಡಾ ನಮ್ಮ ದೇಶದಲ್ಲಿಲ್ಲ.



ಪ್ರತಿಕ್ರಿಯಿಸಿ: feedback@sudha.co.in